ಕರ್ನಾಟಕ ಸರ್ಕಾರ

ಪರೀಕ್ಷಾ ತುರ್ತು

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ. ಬೆಂಗಳೂರು-560003

**********************************************************************************************

ಸಂಖ್ಯೆ:ಎ8/ಎಸ್ಎಸ್ಎಲ್‌ಸಿ/ಪೂಪ-22/09/2022-23 ದಿನಾಂಕ: 15.06.2022

ತುರ್ತಾಗಿ ಮತ್ತು ಕಡ್ಡಾಯವಾಗಿ ಪರಿಶೀಲಿಸುವುದು

## :: ಸುತ್ತೋಲೆ ::

ವಿಷಯ:-ಜೂನ್-2022ರ ಮಾಹೆಯಲ್ಲಿ ನಡೆಯಲಿರುವ 2021-22ನೇ ಸಾಲಿನ ಎಸ್.ಎಸ್.ಎಲ್.ಸಿ. ಪೂರಕ ಪರೀಕ್ಷೆಗೆ ಹಾಜರಾಗುತ್ತಿರುವ ವಿದ್ಯಾರ್ಥಿಗಳ ಪ್ರವೇಶ ಪತ್ರ ಪರಿಶೀಲನೆ ಕುರಿತು.

******

2022ನೇ ಜೂನ್ ಮಾಹೆಯಲ್ಲಿ ನಡೆಯುವ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಗೆ ಹಾಜರಾಗುತ್ತಿರುವ ವಿದ್ಯಾರ್ಥಿಗಳ ಅಂತಿಮ ಪ್ರವೇಶ ಪತ್ರಗಳನ್ನು ದಿನಾಂಕ: 15.06.2022 ರಂದು ಮಂಡಳಿಯ ಜಾಲತಾಣದ ಶಾಲಾಲಾಗಿನ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಶಾಲಾ ಮುಖ್ಯೋಪಾಧ್ಯಾಯರು ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಮಂಡಳಿಯ ಜಾಲತಾಣದ ಶಾಲಾ ಲಾಗಿನ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ವಿತರಿಸುವುದು. ಒಂದು ವೇಳೆ ಏನಾದರೂ ವ್ಯತ್ಯಯಗಳು ಕಂಡು ಬಂದಲ್ಲಿ ಕೂಡಲೇ ಮಂಡಳಿಯ ಸಂಬಂಧಿಸಿದ ಪರಿಶೀಲನಾ ಶಾಖೆಯ ಶಾಖಾಧಿಕಾರಿಗಳ ಗಮನಕ್ಕೆ ತಂದು ಸರಿಪಡಿಸಿಕೊಂಡು ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ವಿತರಿಸುವುದು.

1. ತಮ್ಮ ಶಾಲೆಯ ಮುಖಾಂತರ ನೋಂದಾಯಿಸಿದ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ, ಡೌನ್‌ಲೋಡ್ ಮಾಡಿಕೊಂಡ **ಪ್ರವೇಶ ಪತ್ರಗಳ ಸಂಖ್ಯೆಗೆ ಸರಿ ಹೊಂದುತ್ತಿವೆಯೇ ಎಂದು** ಪರಿಶೀಲಿಸಿಕೊಳ್ಳುವುದು. ಒಂದು ವೇಳೆ ಯಾವುದಾದರು ವಿದ್ಯಾರ್ಥಿಯ ಪ್ರವೇಶ ಪತ್ರ ಬಂದಿಲ್ಲದಿದ್ದರೆ, ಸದರಿ ವಿದ್ಯಾರ್ಥಿಯ ವಿವರವನ್ನು ಸಮರ್ಥನೆಯೊಂದಿಗೆ / ದಾಖಲೆಗಳೊಂದಿಗೆ ಮಂಡಳಿಗೆ ಕೂಡಲೇ ಕಳುಹಿಸಿಕೊಡುವುದು.
2. ಪ್ರವೇಶ ಪತ್ರದಲ್ಲಿ ಹಾಗೂ ಕೇಂದ್ರ ನಾಮಯಾದಿಪಟ್ಟಿಯಲ್ಲಿ ಭಾವಚಿತ್ರ ಇಲ್ಲದೇ ಇರುವ ವಿದ್ಯಾರ್ಥಿಗೆ ಪರೀಕ್ಷೆ ಬರೆಯಲು ಅನುಮತಿ ನೀಡಲಾಗುವುದಿಲ್ಲ. ಇದರಿಂದ ವಿದ್ಯಾರ್ಥಿಗೆ ಆಗುವ ತೊಂದರೆಗೆ ಸಂಬಂಧಿಸಿದ ಶಾಲಾ ಮುಖ್ಯಸ್ಥರೇ ಜವಾಬ್ದಾರರಾಗಿದ್ದು, ಮಂಡಳಿಯು ಇದರ ಜವಾಬ್ದಾರಿ ಹೊರುವುದಿಲ್ಲ ಎಂದು ಸ್ಪಷ್ಟಪಡಿಸಿದೆ.
3. ಶಾಲಾಲಾಗಿನ್‌ನಿಂದ ಮುದ್ರಿಸಿಕೊಂಡಿರುವ ಪ್ರವೇಶ ಪತ್ರಗಳನ್ನು ಅಭ್ಯರ್ಥಿಗಳಿಗೆ ಕೂಡಲೇ ವಿತರಿಸುವುದು ಹಾಗೂ ಪ್ರವೇಶ ಪತ್ರದಲ್ಲಿ ನೀಡಲಾಗಿರುವ ಸೂಚನೆಗಳನ್ನು ತಪ್ಪದೇ ಪಾಲಿಸುವಂತೆ ತಿಳಿಸುವುದು.
4. ಪುನರಾವರ್ತಿತ ವಿದ್ಯಾರ್ಥಿಗಳಿಗೆ ಪಾಸಾದ ವಿಷಯಕ್ಕೆ ಪರೀಕ್ಷೆ ಬರೆಯುವಂತೆ ಮುದ್ರಣವಾಗಿದ್ದಲ್ಲಿ, ಪಾಸಾದ ಬಗ್ಗೆ ಚುಕ್ಕೆ ಗುರುತಿಲ್ಲದ ಫಲಿತಾಂಶ ಪಟ್ಟಿಯನ್ನು ಮುಖ್ಯಶಿಕ್ಷಕರು ದೃಢೀಕರಿಸಿ ಪರೀಕ್ಷೆ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಪರಿಶೀಲನಾ ಶಾಖೆಯ ಶಾಖಾಧಿಕಾರಿಗಳಿಗೆ ಕಳುಹಿಸುವುದು.
5. NSR ಅಭ್ಯರ್ಥಿಗಳು ಈ ಮೊದಲು ಸಾಮಾನ್ಯ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗೆ ಹಾಜರಾಗುತ್ತಿದ್ದು, ಜೂನ್-2018ರ ಪೂರಕ ಪರೀಕ್ಷೆಯಿಂದ ಆಡಳಿತ ಹಾಗೂ ತಾಂತ್ರಿಕ ಕಾರಣಾಂತರಗಳಿಂದ ಜಿಲ್ಲಾ ಖಾಸಗಿ ಪರೀಕ್ಷಾ ಕೇಂದ್ರಗಳಿಗೆ ಸೇರ್ಪಡೆ ಮಾಡಲಾಗಿದೆ. ಶಾಲಾ ಮುಖ್ಯ ಶಿಕ್ಷಕರು ಸಂಬಂಧಿಸಿದ ಅಭ್ಯರ್ಥಿಗಳಿಗೆ ಮಾಹಿತಿಯನ್ನು ನೀಡುವುದು.
6. ಪ್ರವೇಶ ಪತ್ರವನ್ನು ಪಡೆಯುವಲ್ಲಿ ಅಭ್ಯರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಸೂಕ್ತ ಕ್ರಮವಹಿಸುವುದು.

**ಜೂನ್ –2022ರ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಯ ಅಂತಿಮ ಪ್ರವೇಶ ಪತ್ರಗಳಲ್ಲಿ ತಿದ್ದುಪಡಿಗಳಿದಲ್ಲಿ ಪ್ರಸ್ತಾವನೆಯನ್ನು ರವಾನಿಸಬೇಕಾದ ಮಂಡಳಿಯ ಅಧಿಕಾರಿಗಳ ಹೆಸರು ಮತ್ತು ಸಂಬಂಧಿಸಿದ ಜಿಲ್ಲೆಗಳ ಮಾಹಿತಿ.**

| ಕ್ರ ಸಂ | ಶಾಖೆ | ಪರಿಶೀಲನಾ ಅಧಿಕಾರಿಗಳು ಶ್ರೀಮತಿ: ಶ್ರೀ | ಜಿಲ್ಲೆ | ದೂರವಾಣಿ ಸಂಖ್ಯೆ |
|---|---|---|---|---|
| 1 | ಎಫ್ | ಸಂಧ್ಯಾ ಹೆಚ್ ಎಸ್<br>ಸಹಾಯಕ ನಿರ್ದೇಶಕರು | ಬೆಂಗಳೂರು ದಕ್ಷಿಣ / ಹಾವೇರಿ / ಶಿವಮೊಗ್ಗ | 9886846881 |
| 2 | ಜಿ | ನರೇಂದ್ರಕುಮಾರ್. ಬಿ<br>ಸಹಾಯಕ ನಿರ್ದೇಶಕರು | ಬೆಂಗಳೂರು ಉತ್ತರ/ಚಿಕ್ಕಬಳ್ಳಾಪುರ/ ಕೋಲಾರ | 9900190492 |
| 3 | ಹೆಚ್ | ಎಂ.ಎನ್.ಶ್ರೀನಿವಾಸ್<br>ಸಹಾಯಕ ನಿರ್ದೇಶಕರು | ಚಿತ್ರದುರ್ಗ/ದಾವಣಗೆರೆ/ಬೆಂಗಳೂರು ಗ್ರಾಮಾಂತರ/ರಾಮನಗರ | 9449052591 |
| 4 | ಜೆ | ಭಾಗ್ಯವತಮ್ಮ. ಎಂ<br>ಸಹಾಯಕ ನಿರ್ದೇಶಕರು | ಮೈಸೂರು/ ಹಾಸನ/ ಚಿಕ್ಕಮಗಳೂರು/ ಕೊಡಗು | 9449812887 |
| 5 | ಐ | ಗೋಪಿನಂದನ್<br>ಸಹಾಯಕ ನಿರ್ದೇಶಕರು | ಚಾಮರಾಜನಗರ/ಮಂಡ್ಯ/ ತುಮಕೂರು/ ಮಧುಗಿರಿ | 9449524725 |
| 6 | ಕೆ | ಗಾಯತ್ರಿದೇವಿ<br>ಹಿರಿಯ ಸಹಾಯಕ ನಿರ್ದೇಶಕರು | ಗದಗ/ ಕೊಪ್ಪಳ/ ಬಿಜಾಪುರ/ ಬಾಗಲಕೋಟೆ | 9986090437 |
| 7 | ಎಲ್ | ಜಯರಾಮುಡು<br>ಸಹಾಯಕ ನಿರ್ದೇಶಕರು | ಧಾರವಾಡ/ ಚಿಕ್ಕೋಡಿ/ ಬೆಳಗಾವಿ | 9449674952 |
| 8 | ಎಂ | ಗಿರೀಶ್. ಸಿ.ಜಿ<br>ಹಿರಿಯ ಸಹಾಯಕ ನಿರ್ದೇಶಕರು | ಮಂಗಳೂರು/ ಉಡುಪಿ/ ಕಾರವಾರ/ಶಿರಸಿ/ ರಾಯಚೂರು | 9448542295 |
| 9 | ಎನ್ | ಸಿ ವಿ ನಟರಾಜ<br>ಹಿರಿಯ ಸಹಾಯಕ ನಿರ್ದೇಶಕರು | ಗುಲ್ಬರ್ಗಾ/ ಯಾದಗಿರಿ/ ಬೀದರ್/ ಬಳ್ಳಾರಿ | 7892937084 |

ಜೂನ್–2022ರ ಪೂರಕ ಪರೀಕ್ಷೆಯ ವೇಳಾಪಟ್ಟಿಯಂತೆ ಪರೀಕ್ಷೆಗೆ ಸಕಾಲದಲ್ಲಿ ಹಾಜರಾಗಲು ಸಂಬಂಧಿಸಿದ ಅಭ್ಯರ್ಥಿಗಳಿಗೆ/ಪೋಷಕರಿಗೆ ಮನವರಿಕೆ ಮಾಡಲು ಮುಖ್ಯಶಿಕ್ಷಕರಿಗೆ ತಿಳಿಸಿದೆ.

15/6/2022
(ಹೆಚ್.ಎನ್.ಗೋಪಾಲಕೃಷ್ಣ)
ನಿರ್ದೇಶಕರು ಪರೀಕ್ಷೆಗಳು

**ಇವರಿಗೆ,**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ)ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮುಂದಿನ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಪ್ರೌಢ ಶಾಲಾ ಮುಖ್ಯಶಿಕ್ಷಕರುಗಳಿಗೆ ಅಗತ್ಯ ಕ್ರಮಕ್ಕಾಗಿ
5. ಶಾಖಾಧಿಕಾರಿಗಳು, ಬಿ & ಸಿ ಶಾಖೆಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
6. ಶಾಖಾಧಿಕಾರಿಗಳು ಗಣಕ ಶಾಖೆ ಇವರು ಈ ಸುತ್ತೋಲೆಯನ್ನು ಮಂಡಳಿಯ ಅಂತರ್‌ಜಾಲ & ಶಾಲಾಲಾಗಿನ್‌ನಲ್ಲಿ ಪ್ರಕಟಿಸುವುದು ಮತ್ತು ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಇಮೇಲ್‌ಗೆ ಕಳುಹಿಸುವುದು.
7. ನಿರ್ದೇಶಕರು / ಕಾರ್ಯದರ್ಶಿಗಳ ಆಪ್ತ ಶಾಖೆಯ ಮಾಹಿತಿಗಾಗಿ,
8. ಮಂಡಳಿಯ ಎಲ್ಲಾ ಶಾಖಾಧಿಕಾರಿಗಳು ಮತ್ತು ಅಧೀಕ್ಷಕರುಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
9. ಕಛೇರಿ ಪ್ರತಿ.

**ಪ್ರತಿಯನ್ನು ಗೌರವಪೂರ್ವಕವಾಗಿ :–**

ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಸಲ್ಲಿಸಿದೆ.